


ಕ್ಯಾಮೆರಾಗಳಿಗೆ ಅಡ್ಡವಾಗಿ ಬರುವ ಹತ್ತಾರು ಮೊಬೈಲುಗಳು ಫೋಟೊ ಕ್ಲಿಕ್ಕಿಸಲು ಮುನ್ನುಗ್ಗುತ್ತವೆ. ಇವರ ತರಾತುರಿಯಿಂದಾಗಿ ಕಾರ್ಯಕ್ರಮಕ್ಕೆ ನಿಯೋಜಿತರಾಗಿರುವ ವೃತ್ತಿಪರ ಛಾಯಾಗ್ರಾಹಕರು ಅಪರೂಪದ ಕ್ಷಣಗಳನ್ನು ದಾಖಲಿಸಲು ವಿಫಲರಾಗುತ್ತಾರೆ.

### ಮೊಬೈಲ್ ಬಂದ ಕಥೆ

1973ರಲ್ಲಿ ಮೊದಲ ಬಾರಿಗೆ ಮೊಬೈಲ್ ಬಳಕೆಗೆ ಪ್ರಪಂಚವೇ ಅದನ್ನು ಅಚ್ಚರಿಯೆನ್ನುವಂತೆ ನೋಡಿತು. ಮೊಬೈಲ್ ಫೋನಿನಲ್ಲಿ ಕ್ಯಾಮೆರಾ ಪರಿಚಯಗೊಂಡಿದ್ದು 2000ನೇ ಇಸವಿಯಲ್ಲಿ. ಶಾರ್ಪ್ ಮತ್ತು ಕ್ಯೋಸ್ಸಿರ ಕಂಪನಿಗಳ ಮೊಬೈಲುಗಳಲ್ಲಿ ಕ್ಯಾಮೆರಾಗಳು ಮೊದಲಿಗೆ ಜಪಾನ್ ಮತ್ತು ದಕ್ಷಿಣ ಕೊರಿಯಗಳಲ್ಲಿ ಪೇಟೆಗೆ ಬಂದವು. ನಂತರ ಸೋನಿ ಎರಿಕ್‌ಸನ್, ನೋಕಿಯ, ಮೊಟೊರೊಲ ಇತ್ಯಾದಿ ಕಂಪನಿಗಳ ಮೊಬೈಲ್ ಕ್ಯಾಮೆರಾ ಫೋನ್‌ಗಳು ಬಂದವು. ಇಷ್ಟಾದರೂ ಈ ಕ್ಯಾಮೆರಾಗಳಿಂದ ಕ್ಲಿಕ್ಕಿಸಿದ ಫೋಟೊಗಳು ಜನಪ್ರಿಯತೆ ಪಡೆಯಲಿಲ್ಲ. ಏಕೆಂದರೆ ಆ ಕ್ಯಾಮೆರಾಗಳಲ್ಲಿದ್ದ ಪರದೆ ಕೈಗಡಿಯಾರಕ್ಕಿಂತ ದೊಡ್ಡದೇನೂ ಆಗಿರಲಿಲ್ಲ. ಟಚ್ ಸ್ಕ್ರೀನ್ ಇರುವ ಸ್ಮಾರ್ಟ್‌ಫೋನುಗಳು ಬಂದ ನಂತರ ಮೊಬೈಲ್ ಕ್ಯಾಮೆರಾಗಳ ಗುಣಮಟ್ಟ ಮೇಲ್ದರ್ಜೆಗೇರಿತು ಹಾಗೂ ಫೋನ್ ಬಳಕೆದಾರರ ಉದ್ದೇಶ ಮತ್ತು ಆಲೋಚನೆಯೂ ಬದಲಾಯಿತು.

ಆರಂಭದಲ್ಲಿ 1–2 ಮೆಗಾಪಿಕ್ಸಲ್ ಮೊಬೈಲ್ ಕ್ಯಾಮೆರಾಗಳು ಮಾರುಕಟ್ಟೆಗೆ ಬಂದವು. ಈಗ ಈಗ 48 ಮೆಗಾ ಪಿಕ್ಸಲ್ ಕ್ಯಾಮೆರಾ ಇರುವ ಮೊಬೈಲ್‌ಗಳು ಮಾರುಕಟ್ಟೆಯಲ್ಲಿವೆ. ಇಷ್ಟುದಿನ ಬೇರೆಯವರ ಫೋಟೊ ತೆಗೆಯಲು ಬಳಕೆಯಾಗುತ್ತಿದ್ದ ಹಿಂಬದಿಯ ಕ್ಯಾಮೆರಾ ಜೊತೆಗೆ ಸೆಲ್ಫಿಗೆಂದು ಮುಂಬದಿಯ ಕ್ಯಾಮೆರಾ ಪರಿಚಯವಾಯಿತು. ಈಗಂತೂ ಇದು ಸರ್ವೇ ಸಾಮಾನ್ಯ ಎನಿಸಿಬಿಟ್ಟಿದೆ. ಇಂಟರ್ನೆಟ್ ಶುಲ್ಕ ಕಡಿಮೆಯಾದ ನಂತರ ಸೆಲ್ಫಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುವ ಪ್ರವೃತ್ತಿಯೂ ಹೆಚ್ಚಾಯಿತು. ಸ್ಮಾರ್ಟ್‌ಫೋನ್ ಫೋಟೊಗ್ರಫಿ ಎನ್ನುವ ಮಾಯಾವಿಯ ಮೋಹಕ್ಕೆ ಸಿಲುಕದವರು ಈಗ ವಿರಳಾತಿವಿರಳ.

### ಎಲ್ಲರೂ ಫೋಟೊ ತೆಗೀತಾರೆ

'ನಿಮಗೆ ಮೊಬೈಲಿನಲ್ಲಿ ಫೋಟೊ ಕ್ಲಿಕ್ಕಿಸಲಿಕ್ಕೆ ಬರುತ್ತಾ?' ಅಂತ ಯಾರನ್ನಾದರೂ ಕೇಳಿ ನೋಡಿ. ಆ ಮಾತಿನಿಂದ ಅವಮಾನವಾದಂತೆ ಅವರು ನಮ್ಮೆಡೆಗೆ ನೋಡುತ್ತಾರೆ. 'ಎಲ್‌ಕೆಜಿ ಓದುವ ಮಗಳೇ ಮೊಬೈಲಿನಿಂದ ಎಷ್ಟು ಚೆಂದ ಫೋಟೊ ತೆಗೆಯುತ್ತಾಳೆ. ನನಗೆ ಬರುವುದಿಲ್ಲವಾ' ಎಂದು ಮರುಪ್ರಶ್ನಿಸುತ್ತಾರೆ. ಮೂರು ವರ್ಷದ ಮಗುವಿನಿಂದ 90 ದಾಟಿದ ಅಜ್ಜಿಗೂ ಮೊಬೈಲಿನಲ್ಲಿ ಫೋಟೊ ಕ್ಲಿಕ್ಕಿಸುವುದು ಗೊತ್ತು. ಆದರೆ ಇನ್ನೂ ತಿಳಿದುಕೊಳ್ಳಬೇಕಾದ್ದು ಎಷ್ಟೊಂದು ಇದೆ ಗೊತ್ತಾ?

ಬುದ್ಧಿ ಬಂದಾಗಿನಿಂದ ನಾವೆಲ್ಲ ಕನ್ನಡಿ ಮುಂದೆ ನಿಲ್ಲುತ್ತಿದ್ದೇವೆ ಮತ್ತು ನಮ್ಮ ಬಿಂಬವನ್ನು ನೋಡಿಕೊಳ್ಳುತ್ತೇವೆ. ಇದು ಒಂದು ರೀತಿ ಪ್ರದರ್ಶನಪ್ರಿಯತೆಯ ಸಂಕೇತ. ಇದರ ವಿಸ್ತರಿತ ಭಾಗವಾಗಿ ಮೊಬೈಲ್ ಫೋಟೊಗ್ರಫಿಯ ಸೆಲ್ಫಿಯನ್ನು ನೋಡಬಹುದು. ಕನ್ನಡಿ ಮುಂದೆ ನಿಂತಂತೆ ನಿಂತುಕೊಂಡು ಈಗ ಫೋಟೊ ಕ್ಲಿಕ್ಕಿಸಿಕೊಳ್ಳುತ್ತೇವೆ. ಕನ್ನಡಿ ನಮ್ಮ ಭಾವ ಬಿಂಬವನ್ನು ಕಾಣಿಸಿದರೂ ದಾಖಲಿಸಿಕೊಳ್ಳುವುದಿಲ್ಲ. ಆದರೆ ಕನ್ನಡಿಯಂತೆಯೇ ನಮ್ಮ ಮುಖವನ್ನು ತೋರಿಸುವ ಮೊಬೈಲುಗಳ ಕ್ಯಾಮೆರಾಗಳಲ್ಲಿ ನಮ್ಮ ಭಾವಚಿತ್ರಗಳು ದಾಖಲಾಗುತ್ತವೆ. ನಾವು ಯಾವಾಗ ಬೇಕಾದರೂ ಕನ್ನಡಿ ನೋಡಿಕೊಳ್ಳಬಹುದು. ಸಾಮಾಜಿಕ ಜಾಲತಾಣದ ಮೂಲಕ ಪ್ರಪಂಚದ ಯಾವ ಮೂಲೆಗೆ ಬೇಕಾದರೂ ಕಳಿಸಬಹುದು. ಈ ಕ್ಷಣದ ಫೋಟೊ ಹಳತೆನ್ನಿಸಿದರೆ, ಮತ್ತೊಮ್ಮೆ ಸೆಲ್ಫಿ ತೆಗೆದುಕೊಳ್ಳಬಹುದು.

ನಿಮ್ಮ ಬಾಲ್ಯ ಕಾಲದ ಫೋಟೊಗಳನ್ನು ಗಮನಿಸಿ ನೋಡಿ. ಆ ಛಾಯಾಪಟಗಳನ್ನು ನೋಡಿದಾಗಲೆಲ್ಲ ಮನಸ್ಸನ್ನು ಹಿತವಾದ ಭಾವವೊಂದು ಆವರಿಸಿಕೊಳ್ಳುತ್ತದಲ್ಲವೇ? ಅಂಥ ಭಾವ ಇಂದಿನ ಸೆಲ್ಫಿಗಳಿಂದ ದೊರೆಯುವುದು ಸಾಧ್ಯವೇ? ಈಗ ಮೊಬೈಲಿನಲ್ಲಿ ನಾವು ಎಷ್ಟೇ ಫೋಟೊ ತೆಗೆದುಕೊಂಡರೂ, ಚಿತ್ರ ವಿಚಿತ್ರ ರೀತಿಯಲ್ಲಿ ಮುಖದಲ್ಲಿನ ಭಾವನೆಗಳನ್ನು ಬದಲಿಸಿಕೊಂಡು ಫೋಟೊ ಕ್ಲಿಕ್ಕಿಸಿದರೂ ಆ ಕ್ಷಣಕ್ಕೆ ಆ ಚಿತ್ರಗಳು ಖುಷಿಕೊಡುತ್ತವಷ್ಟೇ – ಆಮೇಲೆ ಸಮಾಧಾನ ಉಳಿಯುವುದಿಲ್ಲ. ಆ ಕಾರಣಕ್ಕಾಗಿಯೇ ಸೆಲ್ಫಿ





